ISSN: 2249-894X IMPACT FACTOR : 3.8014 (UIF)

REVIEW OF RESEARCH
UGC APPROVED JOURNAL NO. 48514
VOLUME - 6 | ISSUE - 9 | JUNE - 2017

# ಬಸವಣ್ಣ ; ಪ್ರಸ್ತುತತೆ

ಡಾ ಶಿವಯ್ಯ
ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು.



ಬಸವಣ್ಣ ಜಗತ್ತು ಕಂಡ ಮಹಾನ್ ಮಾನವ. ಇಂದಿನ ದಿನಗಳಲ್ಲಿ ಬಸವಣ್ಣನನ್ನು ವಿಶ್ಲೇಷಿಸುವುದು ತುಂಬಾ ಜರೂರುವಾದ ಕಾರ್ಯ. ಬಸನಣ್ಣ ಏನನ್ನು ಮಾಡಬಾರದು ಎಂದರು ನಾವು ಅದೇಲ್ಲವನ್ನು ಮಾಡುತ್ತಿದ್ದೇವೆ. ಧರ್ಮ, ಸಂಸ್ಕೃತಿ, ಆಚರಣೆ, ಆರ್ಥಿಕತೆ, ಕಾಯಕ, ದಾಸೋಹ, ನಡೆ–ನುಡಿ, ಶಿಷ್ಟಾಚಾರ, ಸಂಯಮ, ಬದುಕಿನ ವೈಚಾರಿಕತೆ, ಸಂಬಂದಗಳ ಶೀಲತೆ, ಸಮಾಜದ ರೂಡಿ ನಿಯಮ ಇವೆಲ್ಲವುಗಳನ್ನು ಅಚ್ಚು ಕಟ್ಟಾಗಿ ಸಮಾಜದ ಜನರಿಗೆ ತಿಳಿಸಿಕೊಟ್ಟರು ಪಾಲನೆಯಾಗುತ್ತಿಲ್ಲ.

ನುಡಿದರೆ ಮತ್ತಿನ ಹಾರದಂತಿರಬೇಕು ಅನ್ನುವುದರ ಮುಖಾಂತರ ಮನುಷ್ಯ ಮಾತನಾಡುವ ರೀತಿ, ಬಗೆಗಳನ್ನು ಕಲಿಸಿದರು. ಮಾತು ಮೌನವಾಗದೆ ಸದುವಿನಯವಾಗಬೇಕು ಅಂದಾಗ ಜೀವನ ಸಾರ್ಥಕವಾಗುತ್ತದೆ. ಸದುವಿನಯದ ಜೋತೆಗೆ ಶಿಷ್ಟಾಚಾರವಿರಬೇಕು. ಕಳವು, ಸುಳ್ಳು, ಕೊಲೆ, ದಗಾ, ಮೋಸ, ವಂಚನೆ, ಅಸಹ್ಯಪಡುವಿಕೆ ಇವಾವು ಇರಬಾರದು. ಮನೆಗೆ ಬಂದವರನ್ನು ತನ್ನಂತೆ ಕಂಡು ಅವರನ್ನು ಉಪಚರಿಸಬೇಕು, ಬಂದವರಲ್ಲಿ ಭಗವಂತನನ್ನು ಕಾಣಬೇಕು. ಬಂದವನು ಕಳ್ಳನಾದರು ಸರಿ ಸುಳ್ಳನಾದರೂ ಸರಿ ಅವರಲ್ಲಿ ಪ್ರೀತಿ, ದಯೆ, ಕರುಣೆ ತೋರಬೇಕು.

ಬಸವಣ್ಣನ ಮೂಲ ಉದ್ದೇಶ ಭಕ್ತಿ, ಧರ್ಮ ಎಂದು ಪರಿಭಾವಿಸಲಾಗಿದೆ. ಆದರೆ ಬಸವಣ್ಣ ಮನುಷ್ಯನ ಸರ್ವಾಭಿವೃದ್ಧಿಯ ತತ್ವ, ಸಿದ್ದಾಂತಗಳನ್ನು ಹೇಳಿ ನಡೆದು ತೋರಿದ ಮೊದಲಿಗ. ಆಗಂದ ಮಾತ್ರಕ್ಕೆ ಧರ್ಮ, ಭಕ್ತಿ ಮುಖ್ಯ ಅಲ್ಲ ಅಂತ ಅಲ್ಲ. ಧರ್ಮ ಭಕ್ತಿಯಿಂದ ಕೂಡಿದರೆ ಮನುಷ್ಯ ಸಾಧಕನಾಗುತ್ತಾನೆ. ಸಾಧಕನಾದಾಗ ಜಂಗಮನಾಗುತ್ತಾನೆ. ಬಸಣ್ಣನದು ಜಂಗಮ ಪರಿಕಲ್ಪನೆ ಅದ್ಭುತವಾದದು ಜಂಗಮ ಜಾತಿ, ಮತ, ಪಂತ, ಕಾಲ, ದೇಶಕ್ಕೆ ಸೀಮಿತವಾಗದೆ ಸರ್ವರಿಗೂ ಸೇರಿದ್ದೆಂದರ್ಥ. ಅದ್ದರಿಂದ ಬಸವಣ್ಣ ಸ್ಥಾವರದಿಂದ ಜಂಗಮಕ್ಕೆ ಬಂದದ್ದು. ಸ್ಥಾವರಗಳು ಸ್ತರಗಳನ್ನು ಸೃಷ್ಟಿಸಿ ಸಮಾಜದಲ್ಲಿ ಪಂಗಡಗಳನ್ನು ತಂದು ಕೋಮುವಾದಕ್ಕೆ ನಾಂದಿಯಾಗುತ್ತದೆ. ಕಾರಣ ಜಂಗಮ ಇವುಗಳನ್ನು ಮೀರಿ ಸರ್ವರನ್ನು ತನ್ನೊಡಲೊಳಗೆ ಸೇರಿಸಿಕೊಳ್ಳುತ್ತದೆ.

ಬಸವಣ್ಣನದು ಬಹುಮುಖ ವ್ಯಕ್ತಿತ್ವ. ಯಾವ ಧರ್ಮ, ಜನಾಂಗದರಾದರು ಇವರ ವ್ಯಕ್ತಿತ್ವವನ್ನು ಅಳವಡಿಸಕೊಳ್ಳಬಹುದು. ಇದರಲ್ಲಿ ಇನ್ನೊಂದು ವಿಶೇಷವಿದೆ ಅವರದು ವೈಕ್ತಿಕ ಮತ್ತು ಸಾರ್ವತ್ರಿಕ ಬದುಕು. ಸಮಾಜಕ್ಕೆ ಬಂದಾಗ ಕಳಬೇಡ, ಕೊಲಬೇಡ ಎಂಬ ಸಪ್ತ ಸೂತ್ರಗಳನ್ನು ಏಳುತ್ತಾ, ಲೋಕದ ಡೊಂಕು ನೀವೇಕೆ ತಿದ್ದುವಿರಿ ಎನ್ನವ ಬಸವಣ್ಣ ಮನೆಗೆ ಬಂದ ಕಳ್ಳನ್ನು ಸಾಕ್ಷಾತ್ ಕೂಡಲಸಂಗಮದೇವ ಎನ್ನುವರು. ಅಂದರೆ ಒಬ್ಬ ವ್ಯಕ್ತಿ ಅಗತ್ಯಕ್ಕಿಂತ ಹೆಚ್ಚು ದ್ರವ್ಯವನ್ನು ಸಂಗ್ರಹ ಮಾಡಬಾರದು. ಏಕೆಂದರೆ ಅದು ದೇವನದು ಅದರ ಮೇಲಿನ ಹಕ್ಕು ದೇವನದು ಮಾತ್ರ. ಆದ್ದರಿಂದ ಬಸವಣ್ಣ ತನ್ನ ಮನೆಯಲ್ಲಿ ದ್ರವ್ಯವನ್ನು ಕದ್ದೊಯ್ಯಲು ಬಂದ ಕಳ್ಳನನ್ನು ದೇವ ಎಂದು ಸಂಭೋದಿಸುತ್ತಾನೆ. ಪ್ರಧಾನಿಯಾದ ಬಸವಣ್ಣ ಅವನಿಗೆ ಯಾವ ಶಿಕ್ಷೆಯಾದರೂ ಕೊಡಬಹುದಿತ್ತು ಆದರೆ ಹಾಗೆ ಮಾಡಲಿಲ್ಲ, ಅಲ್ಲದೆ ದ್ರವ್ಯವನ್ನು ಕೊಟ್ಟು ಕಳುಹಿಸುತ್ತಾನೆ. ಆತನೆ ನಡೆ ನುಡಿ ಒಂದಾದ ಬಗೆ ಬಸವಣ್ಣನಿಗೆ ಮಾತ್ರ ಸಾದ್ಯ, ಆತನ ದ್ವೀಮುಖ ವ್ಯಕ್ತಿತ್ವಕ್ಕೆ ಹಿಡಿದಗನ್ನಡಿ.

ದಾಸೋಹ ಎಂಬುದು ಬಸವಣ್ಣನ ಅತಿ ಮಹತ್ವದ ಪರಿಕಲ್ಪನೆ. ದಾನ ಎಂದರೆ ಕೊಡುವುದು. ಇಲ್ಲಿ ಕೊಡುವ ಮತ್ತು ತೆಗೆದುಕೊಳ್ಳುವ ಕ್ರೀಯೆ ನಡೆಯುತ್ತದೆ. ಕೊಡುತ್ತೇನೆ ಎಂಬ ಅಹಂಕಾರ ತೆಗೆದುಕೊಳ್ಳುತ್ತೇನೆ ಕೀಳಿರಿಮೆಯಿರುತ್ತದೆ. ಆದರೆ ಪ್ರಸಾದ

ಆಗಲ್ಲ, ದಾಸೋಹದಲ್ಲಿ ನನ್ನದು ಎಂಬ ಅಹಂಭಾವವಾಗಲಿ, ಸೊಕ್ಕು ಆಗಲಿ ಇರುವುದಿಲ್ಲ. ಭಗವಂತನದನ್ನು ಭಗವಂತನಿಗೆ ಸಲ್ಲಿಸುತ್ತೇನೆ ಎಂಬ ನಿಷ್ಕಲ್ಮಷ ಭಾವವಿರುತ್ತದೆ. ಕೊಡುವಾತ ಶರಣ ತೆಗೆದುಕೊಳ್ಳುವಾತ ಶರಣ, ಬೇಡುವ ಬೇಡಿಸಿಕೊಳ್ಳುವ ಯಾವ ಕ್ರೀಯೆಗಳು ಇರುವುದಿಲ್ಲ. ಇಬ್ಬರಲ್ಲಿ ಸಮರ್ಪಣ ಭಾವವಿರುತ್ತದೆ. ಬಡವ ಶ್ರೀಮಂತ ಎಂಬ ಭೇದ ಭಾವವಿಲ್ಲ. ಯಾರು ಭಕ್ತಿಯಿಂದ ನೀಡುವ ಕೊಡುವ ಕಾರ್ಯ ಮಾಡುತ್ತಾರೆ ಅದು ದಾಸೋಹವಾಗುತ್ತದೆ.

ಪ್ರೀತಿಯನ್ನುವುದನ್ನು ಭಕ್ತಿರೂಪದಲ್ಲಿ ತೋರಿ ಭಕ್ತಿಯನ್ನು ಸಾರ್ವತ್ರಿಕ ಗೊಳಿಸಿ ಜನರನ್ನ ಶುದ್ಧಮಾಡಿದ ಕೀರ್ತಿ ಅಪ್ಪ ಬಸವಣ್ಣನಿಗೆ ಸಲ್ಲುತ್ತದೆ. ಸ್ಥಾವರ ಕಪಿಮುಷ್ಠಿಯಲ್ಲದ್ದ ಭಕ್ತಿಯನ್ನು ಅರಮನೆ ಗುರುಮನೆಗಳಲ್ಲಿದ್ದ ಭಕ್ತಿಯನ್ನು ಗುಡಿಸಲಿಗೆ ತಂದ. ಸ್ಥಾವರವನ್ನು ದಿಕ್ಕರಿಸಿ ಯಾವ ಜಾತಿಯನ್ನು ಪರಿಗಣಿಸದೆ ಎಲ್ಲರ ದೇಹವೆ ದೆಗುಲವನ್ನು ಮಾಡಿದರು. ದೇವರು, ಪೂಜಾರಿ, ಭಕ್ತ ಅನ್ನುವ ಮೂರು ಪಂಗಡಗಳು ಸಮಾಜವನ್ನು ನಿರ್ವಹಿಸುತ್ತಿದ್ದವು ಅದರ ಪರಿಣಾಮ ಸಮಾಜದಲ್ಲಿ ಭೇದ–ಭಾವ ಉಂಟಾಗಿ ಕಲಹಗಳು ಘಟಿಸುತ್ತದ್ದವು. ಕೆಲವರ್ಗಗಳಿಗೆ ಮಾತ್ರ ದೇವಾಲಯಗಳಗೆ ಪ್ರವೇಶವಿತ್ತು. ಸಮಾಜದ ಅರ್ದಷ್ಟು ಜನ ಇದರಿಂದ ವಂಚಿತರಾಗುತ್ತದ್ದರು.

ಬಸವಣ್ಣ ಮನುಷ್ಯ ಸಹಜ ಪ್ರೀತಿ, ಕಾಳಜಿ, ಕರುಣೆಗಳಿಂದ ಕೂಡಿದಾತ. ಮನೆ ಬಂದ ಕಳ್ಳನನ್ನು ಸಾಕ್ಷಾತ ಕೂಡಲಸಂಗಮದೇವ ಎಂದ. ಹಸುಗಳನ್ನು ಕದ್ದುಕೊಂಡು ಹೋದಾಗ ಅವರನ್ನು ಶಿಕ್ಷಿಸದೆ ಹಸುಗಳಿದ್ದಲ್ಲಿಗೆ ಕರುಗಳನ್ನು ಸೇರಿಸಿ ಎಂದು ಆಜ್ಞಾಪಿಸುತ್ತಾರೆ. ಕರುಗಳು ತಮ್ಮ ತಾಯಿ ಪ್ರೀತಿಯಿಂದ ವಂಚಿತವಾಗುತ್ತವೆ ಎನ್ನುವು ಒಂದಾದರೆ, ಹಸುಗಳನ್ನು ಕದ್ದುಹೊಯ್ದುವರಿಗೆ ಹಾಲಿನ ಮತ್ತು ಹಸುಗಳ ಅವಶ್ಯಕತೆ ಇರಬಹುದು ಎಂದು "ಅಲ್ಲಿ ಉಂಬರೆ ಸಂಗ ಇಲ್ಲಿ ಉಂಬರೆ ಸಂಗ" ಸಮಾಜದ ಅವಶ್ಯಕತೆಗಳನ್ನು ಅರೀತು ಅಲ್ಲಿಯು ಸಂಗಮನಾಥನಿದ್ದಾನೆ ಇಲ್ಲಿಯು ಸಂಗಮನಾಥನಿದ್ದಾನೆ ಎಂದು ಸಮಾಜದಲ್ಲಿ ದೇವರನ್ನು ಕಾಣುವುದರ ಮುಖಾಂತರ ಸ್ಥಾವರವನ್ನು ಧಿಕ್ಕರಿಸಿ ಜಂಗಮ ತಂತವರು.

ದಾಸೋಹದಂತೆ ಪ್ರಸಾದ ಎಂಬ ಸಿದ್ಧಾಂತವನ್ನು ಚಾಲ್ತಿಗೆ ತಂದವರು. ಸಾಮಾನ್ಯರು ಮನೆಗೆ ಬಂದ ಅತಿಥಿಗಳಿಗೆ ಕೊಡುವ ಊಟವನ್ನು ದಾನ ಎಂದು ಪರಿಗಣಿಸುತ್ತಾರೆ. ಅವರಿಗೆ ಇಷ್ಟವಾಗುವುದನ್ನು ಕೊಡುತ್ತೇವೆ. ಆದರೆ ಅದು ಹಾಗಲ್ಲ ಆತನಿಗೆ ಮನಪೂರ್ವಕವಾಗಿ ಇಷ್ಟವಾದನ್ನು ನೀಡಬೇಕು. ಅದನ್ನೆ ಪ್ರಸಾದ ಎನ್ನುವರು. ಒಂದು ಸಲ ಮಹಾಮನೆಯ ದಾಸೋಹದಲ್ಲಿ ಪ್ರಸಾದ ಸಂದರ್ಭದಲ್ಲಿ ನೂಲಿಯ ಚಂದಯ್ಯ ಈರುಳ್ಳಿಯನ್ನು ಕೇಳುತ್ತಾನೆ. ನೀಡಲು ನಿರಾಕರಿಸುತ್ತಾರೆ ಆಗ ಆತ ಸಿಟ್ಟುಗೊಂಡು ಪ್ರಸಾದ ಮಾಡುವುದನ್ನು ಬಿಟ್ಟು ಹೋರಟು ಹೋಗುತ್ತಾನೆ. ಇದನ್ನ ತಿಳಿದ ಬಸವಣ್ಣ ಆತನ ಇಷ್ಟದ ಈರುಳ್ಳಿಯ ರಥವನ್ನು ಮಾಡಿಸಿ ಆ ರಥದಲ್ಲಿಯೇ ಕರೆ ತರುತ್ತಾರೆ. ಆಹಾರ ಪದ್ದತಿಯಲ್ಲಿ ಕೂಡ ಬಿನ್ನವಿಲ್ಲ. ಅವರಿಗೆ ಇಷ್ಟವಾದ ಆಹಾರವನ್ನು ಸೇವಿಸಬೇಕು ಎಂಬುದು ಬಸವಣ್ಣನ ಅಚಲ ನಿರ್ದಾರವಾಗಿತ್ತು.

ಸ್ವರ್ಗ ನರಕಗಳ ಕಲ್ಪನೆಗೆ ಬಂದಾಗ ಅವುಗಳು ನಮ್ಮ ಆಚಾರ, ವಿಚಾರ, ನಡುವಳಿಕೆ, ಪದ್ದತಿಗಳಲ್ಲಿವೆ ಎಂದು ಸಾರಗಟವಾಗಿ ಅಲ್ಲಗಳಿದವರು. ಹಿಂದಿನ ರಾಜರುಗಳು ಸ್ವರ್ಗ ನರಕದ ವ್ಯವಸ್ಥೆಯನ್ನು ಕಲ್ಪಿಸಿ ಯೋಧರನ್ನ ಯುದ್ದಕ್ಕೆ ದೂಡುತ್ತಿದ್ದರು. "ಜೀತೇನೆ ರಾಜಲಕ್ಷ್ಮೀ ಮೃತನಾಪಿ ಸುರಂಗಣ" ಎಂಬ ಉದ್ಘೋಷ ವಾಕ್ಯದಿಂದ ಯುದ್ದಕ್ಕೆ ಕಳುಹಿಸುತ್ತದ್ದರು. ಇದನ್ನು ನಂಬಿದ ಸೈನಿಕರು ಯುದ್ಧದಲ್ಲಿ ಸತ್ತರೆ ನಾವು ವೀರಮರಣವನ್ನು ಅಪ್ಪಿ ಸ್ವರ್ಗ ಸೇರುತ್ತೇವೆ ಎಂದು ಜೀವ ಹಂಗು ತೋರೆದು ಯುದ್ಧಮಾಡುತ್ತದ್ದರು. ಪಾಪ ಅವರಿಗೆ ಸ್ವರ್ಗ ನರಕಗಳು ಇವರ ಸೃಷ್ಠಿ ಎಂದು ತಿಳಿದಿರಲಿಲ್ಲ.

ಮನುಷ್ಯ ಹುಟ್ಟನಿಂದ ಸಾವಿನ ಹೊರಗಿನ ಎಲ್ಲಾ ವಿಚಾರಗಳನ್ನು ಬಸವಣ್ಣ ಬಡಿಬಿಡಿಯಾಗಿ ಹೇಳಿದ್ದಾರೆ. ಅವುಗಳು ಎಷ್ಟರ ಮಟ್ಟಿಗೆ ಜಾರಿಯಲ್ಲಿವೆ ಎಂಬುದೆ ಮೂಲ ಪ್ರಶ್ನೆ. ಬಸವಣ್ಣನ ವಿಚಾರ ಸಿದ್ಧಾಂತಗಳನ್ನು ಇಂದು ತುರ್ತಾಗಿ ಚಾಲ್ತಿಗೆ ತರುವ ಅಗತ್ಯವಿದೆ. ಬಸವಣ್ಣ ಧರ್ಮ, ನ್ಯಾಯ, ನಿಷ್ಠುರ. ಸಮಾನತೆ, ಸಂಸ್ಕಾರಗಳ ಪ್ರತಿಬಿಂಬ. ಇವರನ್ನು ಜನರು ಇಂದು ಊರುಗೋಲಾಗಿ ಮಾಡಿಕೊಂಡು ತಮ್ಮ ಬೆಳೆಗಳನ್ನು ಬೆಯಿಸಿಕೊಳ್ಳುತ್ತಿದ್ದಾರೆ. ರಾಜಕೀಯ, ಮಾಡಿಕೊಂಡು ಜನರ ಜನರ ದಾರಿತಪ್ಪಿಸಿ ಆತನ ಮೂಲ ಕನುಗಳನ್ನೆ ಸಮಾಧಿ ಮಾಡುತಿದ್ದಾರೆ. ಇವತ್ತು ಮಾತನಾಡುವುಕ್ಕಿಂತ ಮನ ಮನೆ ಮಟ್ಟಿಗೆ ಸುಧಾರಿಕೊಮಡರೆ ಸಾಕು ಬಸವಣ್ಣನಿಗೆ ಕೃತಜ್ಞತೆ ಸಲ್ಲಿಸಿದಂತಾಗುತ್ತದೆ. ವಚನಗಳನ್ನು ಓದಿದ್ದು ವಿಶ್ಲೇಷಿದ್ದು ತುಂಬಾ ಆಗಿದೆ ಆ ವಿಶ್ಲೇಷಣೆ ಜಾಗತಿಕ ಮುಖವಾಗಿ, ಧರ್ಮಾತೀತವಾಗಿ, ದೇಶಾತೀತಾವಾಗಿ ಮಾಡಬೇಕಾಗಿದೆ. ಕೆವಲ ಧರ್ಮ ವಿಚಾರಗಳನ್ನು ಹೇಳದೆ ಮಾನವನ ಸರ್ವಾಂಗಿಣ ಅಭಿವೃದ್ಧಯನ್ನು ಹೇಳಿಕೊಟ್ಟ ಮೊದಲಿಗ. ಇಂದಿನ ಯುವ ಪೀಳಿಗೆಯಾದರೂ ಇವುಗಳನ್ನು ಅರಿತುಕೊಂಡು ಬದುಕಿದರೆ ಬಸವಣ್ಣನ ಕನಸು ನಸಾದೀತು.